ಶ್ರೀ ಟಿ. ತಾರೇಗೌಡ.—ಉತ್ತರದಲ್ಲಿ ಎರಡು ಕೆರೆಗಳು ಎಂದು ಮಾತ್ರ ಹೇಳಲಾಗಿದೆ. ಇವು ಯಾವುವು ತಿಳಿಸುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್,—ಐದನೇ ಯೋಜನೆಯಲ್ಲಿ ಐದು ಕೆರೆಗಳ ಅಂದಾಜು ಮಾಡಿ ಇಡಲಾಗಿತ್ತು. ಇವುಗಳಲ್ಲಿ ಎರಡು ಕೆರೆಗಳು ಎಂದರೆ ಶೀರನಳ್ಳಿ, ಹಳ್ಳಿಗೆರೆ ಮತ್ತು ಗುಬ್ಬಿ, ಚನ್ನೂರು.

ಶ್ರೀ ಟಿ. ತಾರೇಗೌಡ.—ಎರಡು ವರ್ಷಗಳಿಂದಲೂ ನಮ್ಮ ಭಾಗದ ಐದು ಕೆರೆಗಳ ಅಂದಾಜು ಆಗಿ ಇವು ಚೀಫ್ ಇಂಜನೀಯರ್‌ವರ ಆಫೀಸಿಗೆ ಹೋಗಿ ಇನ್ನೂ ಮಂಜೂರಾಗದೆ ಹಿಡಾಟದಲ್ಲೇ ಇದೆ. ಇದರಿಂದ ಯಾವ ಕೆರೆಗಳೂ ಆಗುತ್ತಿಲ್ಲ ಎನ್ನುವುದು ಗೊತ್ತಿದೆಯೇ ?

ಶ್ರೀ ಎಸ್. ಬಿ. ನಾಗರಾಳ್.—ಚೀಫ್ ಇಂಜನಿಯರವರು ಪರಿಶೀಲನೆ ಮಾಡಿ ಟೆಕ್ನಿಕಲ್ ಫೀಸಿಬಿಲಿಟಿ ಇದೆ ಎಂದು ಕಂಡು ಬಂದು ಅವನ್ನು ಸರಕಾರಕ್ಕೆ ಶಿಫಾರಸು ಮಾಡಿದರೆ ಅದನ್ನು ಐದನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ. ತಾರೇಗೌಡ.—ನಮ್ಮ ಭಾಗ ಪೂರ್ತಿ ಅಭಾವದ ಪ್ರದೇಶಗಳು. ಹೊಸ ಸರಕಾರ ಬಂದಾಗಿನಿಂದಲೂ ನಾನು ಸರಕಾರದ ಗಮನಕ್ಕೆ ತರುತ್ತಿದ್ದರೂ ಇದುವರೆಗೆ ಒಂದು ಕೆರೆಗಳ ಕೆಲಸವಾದರೂ ಆಗಲಿಲ್ಲ. ಎಲ್ಲ ಬರೀ ಹಿಡಾಟಗಳಲ್ಲೇ ಇದೆ. ಹಿಂದಿನ ಸರಕಾರ ಮಂಜೂರು ಮಾಡಿದಂತಹ ಕೆರೆಗಳು ಕೂಡ ಕೆಲಸಗಳಾಗದೆ ಅವು ಅರ್ಧಂಬರ್ಧ ಉಳಿದಿವೆ. ಈಗಲಾದರೂ ಇದು ಅಭಾವ ಪ್ರದೇಶಕ್ಕೆ ಸೇರಿದುದು ಎಂದು ಇವುಗಳನ್ನು ಬೇಗ ಮಂಜೂರು ಮಾಡಿ ಇವುಗಳ ಕೆಲಸಗಳನ್ನು ಪೂರೈಸಿಕೊಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಅಭಾವ ಪ್ರದೇಶ ಎಂದು ತಿಳಿದೇ ಸರಕಾರ ಕೂಡ ಇದರಲ್ಲಿ ವಿಶೇಷ ಆಸಕ್ತಿ ವಹಿಸಿ ಕೆರೆಗಳನ್ನು ಮಾಡಬೇಕೆಂದು ಇದೆ. ಈಗ ನಾನು ಹೇಳಿದ ಕೆಲಸಗಳು ಆರಂಭವಾಗಿ ಮುಗಿಯುವ ದರಲ್ಲಿವೆ. ವ್ಯಾಯಶಃ ಬರುವ 1974ನೇ ಇಸವಿ ಅಖೈರಿನೊಳಗಾಗಿ ಮುಗಿಯುವುದು ಮತ್ತು ಉಳಿದ ಐದು ಕೆರೆಗಳ ಬಗ್ಗೆ ಚೀಫ್ ಇಂಜನೀಯರವರಿಂದ ಫೀಸಿಬಿಲಿಟಿ ವರದಿ ಬಂದ ಕೂಡಲೇ ಅದನ್ನು ಪರಿಶೀಲಿಸಿ ಸರಿಯಾಗಿದ್ದರೆ ಅವನ್ನೂ ಯೋಜನೆಯೊಳಗೆ ಸೇರಿಸುತ್ತೇವೆ.

Orphanage at Kuderu Village, Chamarajnagar Taluk

66. Sri K. SIDDAIAH (Santhemarahally).—

Will the Minister for Education be pleased to state :—

(*a*) the number of orphanages in Mysore District ;

(*b*) the total number of orphans in those orphanages ;

(*c*) the total amount granted, the quantity of food articles supplied to those institutions for the years 1970-71 to 1973-74 (yearwise) ;

(*d*) the rate at which such assistance (in the form of money or kind) was given to orphanage per head per month ;

(*e*)) whether there was an orphage at Kuderu village, Chamarajanagar Taluk at any time ;

(*f*) if so, the year in which it was started and its exact lacation ;

(*g*) the number of Boarders and the amount granted or the food articles, if any, supplied to the orphanage at Kuderu (yearwise) for last three years ;

(*h*) whether the said orphanage was housed in a rented building;

(*i*) the names and address of the members and Secretary, if any, of the management of that orphanage ;

(*j*) the eligibility (conditions or qualifications) for admission to the orphanage ;

(*k*) whether there is any prescribed form of Certificate of orphanage to claim the benefit ?

Sri M. MALLIKARJUNA SWAMY (Minister for Education).—

(*a*) 38.

(*b*) 3071.

(*c*) (*i*) *Amounts granted* :

Year		Rs.
1970–71	...	3,68,420–00
1971–72	...	3,68,420–00
1972–73	...	7,37,040–00
1973–74	...	4,89,000–00

(*ii*) *Quantity of food articles supplied* :

Year	*Wheat*	*Oil*	*Milk Powder*
	(*In* K. Gs.)		
1970–71	...	...	...
1971–72	...	...	...
1972–73	1.12,476	11,902	9,937
1973–74	1,06,570	14,088	15,461

(*d*) (*i*) *Boarding grant* :

(i) at Rs. 10 per head per month in respect of all orphans and destitutes up to 12–10–1971 ;

(ii) after 12–10–1971, at Rs. 20 yer orphan per month and Rs. 10 per destitute per month, up to the end of March 1973 ;

(iii) with effect from 1–4–1973, at the uniform rate of Rs. 20 per head per month for all orphans and destitutes in the orphanages.

(2) *World food programme articles* (*rate per head pes month*)

Year	*Wheat*	*Oil*	*Milk Powder*
1972–73	12 Kgs	1200Gms	1200 Gms
1973–74	6 Kgs	750 Gms	1200 Gms

(SRI M. MALLIKARJUNASWAMY)

(*e*) Yes.

(*f*) Since the Institution is reported to have closed down long ago, the information is not available.

(*g*) Does not arise in view of reply to (*f*) above.

(*h*) Information not available as the orphanage was closed long ago.

(*i*) Information not available as the orphanage was closed long ago.

(*j*) Admissions are being made based no the production of destitute or orphan certificates issued by the respective Tahsildar for for the students for general education.

(*k*) Yes.

ಶ್ರೀ ಕೆ. ಸಿದ್ದಯ್ಯ.—38 ಅನಾಥಾಲಯಗಳು ಎಂದು ಹೇಳಲಾಗಿದೆ. ಇವು ಯಾವುವು ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇವುಗಳ ಪಟ್ಟಿ ದೊಡ್ಡದಾಗಿದೆ. ಆ ಮೇಲೆ ತಮಗೆ ಇದರ ವಿವರಗಳನ್ನು ಒದಗಿಸುತ್ತೇನೆ.

ಶ್ರೀ ಕೆ. ಸಿದ್ದಯ್ಯ.—(ಎಫ್) ಪ್ರಶ್ನೆಯಲ್ಲಿ ಕುದೇರು ಅನಾಥಾಲಯದ ಪ್ರಶ್ನೆ ಕೇಳಿದರೆ ಅದು ಗೊತ್ತಿಲ್ಲ ಎಂದು ಇದೆ. ಇದಕ್ಕೆ ಕಾರಣವೇನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ರಿಕಾರ್ಡುಗಳ ಪ್ರಕಾರ ಇದರ ವಿವರಗಳು ತಿಳಿದಿಲ್ಲ. ಇದನ್ನು ತನಿಖೆಗೆ ಒಳಪಡಿಸಿ ಪರಿಶೀಲಿಸಬೇಕೆಂದು ಈಗಾಗಲೇ ತಿಳಿಸಲಾಗಿದೆ.

ಶ್ರೀ ಬಾಪುಗೌಡ ರಾಯಪ್ಪ.—ಈಗ ಮಾಡಿರತಕ್ಕಂಥ ವ್ಯವಸ್ಥೆ ಸರಿಯಾಗಿಲ್ಲ. ಅದರಿಂದ ಮಕ್ಕಳು ಸಾಕಷ್ಟು ಸಾಯುತ್ತಿದ್ದಾರೆ. ಆದ್ದರಿಂದ ಈ ಅನಾಥ ಮಕ್ಕಳ ವಿಷಯದಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಉತ್ತರವಿಲ್ಲ)

ಶ್ರೀ ಕೆ. ಸಿದ್ದಯ್ಯ.—ತಮ್ಮ ಉತ್ತರದಲ್ಲಿ ಈ ರೀತಿ ಹೇಳಿದ್ದೀರಿ :

"Admissions are being made based on the production of destitute or orphan certificates issued by the respective Tahsildar for the students for general education."

I want to know whether the Government has given instructions to the Tahsildars to decide the cases of giving income certificates on the basis of facts and figures ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅನಾಥ ಎಂದರೆ ಯಾವ ಮಕ್ಕಳಿಗೆ ತಂದೆತಾಯಿ ಇರುವುದಿಲ್ಲವೋ ಅವರು ಅನಾಥ ಮಕ್ಕಳೆಂದು ಪರಿಗಣಿಸಲಾಗುತ್ತದೆ. ಆದರೆ ಈ ಡೆಸ್ಟಿಟ್ಯೂಟ್ಸ್ ಗಳನ್ನು ಸೇರಿಸುವುದರಿಂದಲೇ ಇಷ್ಟೊಂದು ಲೀಕೇಜ್, ದುರಾಡಳಿತ ಮತ್ತು ದುರವಸ್ಥೆ ಉಂಟಾಗಿದೆ. ಅದರ ಡೆಫಿನಿಷನ್ ಕೂಡ ಫೈನಲೈಸ್ ಮಾಡುತ್ತಾ ಇದ್ದೇವೆ. ಅನಾಥಾಶ್ರಮದಲ್ಲಿ ಮಕ್ಕಳನ್ನು ಸಾಕುವುದಕ್ಕೆ ತಂದೆತಾಯಿಗಳಿಗೆ ಆಗದೆ ಇರುವ ಮಕ್ಕಳನ್ನು ಸೇರಿಸಿಕೊಳ್ಳುವುದರಿಂದ ಈ ರೀತಿ ತೊಂದರೆಯಾಗಿದೆ. ಇದನ್ನು ನೋಡಿಕೊಳ್ಳಲು ಸಮಾಜಕಲ್ಯಾಣ ಇಲಾಖೆ ಇದೆ. ಆದುದರಿಂದ ಸಮಾಜಕಲ್ಯಾಣ ಇಲಾಖೆಯವರಿಗೆ ನಾವು ಪ್ರಾರ್ಥನೆ ಮಾಡಿಕೊಂಡಿದ್ದೇವೆ, ನಮ್ಮಲ್ಲಿ ಯಾವುದೇ ರೀತಿಯಾದ ಡೆಸ್ಟಿಟ್ಯೂಟ್‌ಗಳನ್ನು ಸೇರಿಸಿಕೊಳ್ಳಕೂಡದೆಂದು ತೀರ್ಮಾನಕ್ಕೆ ಬಂದಿದ್ದೇವೆ.

† Indicates that remarks or Speeches have not been revised by the member concerned.